ರಾಗಿ ಖರೀದಿ ಸ್ಥಗಿತ, ಆಕ್ರೋಶ

ಬೆಂಗಳೂರು: ಬೆಂಬಲ ಬೆಲೆಯಲ್ಲಿ ರಾಗಿ ಖರೀದಿಸುವ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಸ್ಥಗಿತಗೊಳಿಸಿದ್ದು, ರೈತರಿಂದ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಕಳೆದ ವರ್ಷ ನೋಂದಣಿಯಾಗಿದ್ದರಲ್ಲಿ ಅರ್ಧದಷ್ಟು ರೈತರು ಮಾತ್ರ ಈವರೆಗೆ ನೋಂದಣಿ ಮಾಡಿಕೊಂಡಿದ್ದರು. ಖರೀದಿ ಸ್ಥಗಿತಗೊಂಡಿರುವ ಕಾರಣ, ಉಳಿದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಬಾರಿ ಕ್ವಿಂಟಲ್ ರಾಗಿಗೆ ₹3,377 ನಿಗದಿ ಮಾಡಿ ಪ್ರತಿ ರೈತನಿಂದ ಕೇವಲ 20 ಕ್ವಿಂಟಾಲ್ ಮಾತ್ರ ಖರೀದಿಗೆ ನಿಗದಿಯಾಗಿತ್ತು. ವಿವರ ಪುಟ 10



ಕೈಕೊಟ್ಟ ಆಹಾರ ಇಲಾಖೆ, ಸಂಕಷ್ಟಕ್ಕೀಡಾದ ಬೆಳೆಗಾರರು | ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.50 ಮಾತ್ರ ಖರೀದಿ

ರಾಗಿ ಬೆಂಬಲ ಬೆಲೆಗೆ ಖರೀದಿ ಸ್ಥಗಿತ, ಸರ್ಕಾರದ ವಿರುದ್ಧ ಆಕ್ರೋಶ

■ ಗೋವಿಂದರಾಜು ಚಿನ್ನಕುರ್ಚಿ ಬೆಂಗಳೂರು

ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಧಾನ್ಯ ಖರೀದಿಸುವಲ್ಲಿ ರಾಜ್ಯ ಸರ್ಕಾರದ ಇಬ್ಬಗೆ ನೀತಿ ನಡುವೆಯೇ ಸೋಮವಾರ ರಾಗಿ ಖರೀದಿ ಸೇವೆ ಸ್ಥಗಿತಗೊಂಡಿದೆ. ಕಳೆದ ವರ್ಷ ನೋಂದಣಿಯಾಗಿದ್ದರಲ್ಲಿ ಅರ್ಧದಷ್ಟು ರೈತರು ಮಾತ್ರ ನೋಂದಣಿ ಆಗಿದ್ದು, ಉಳಿದವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರದ ವಿರುದ್ಧ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಆವಧಿ ವಿಸ್ತರಿಸುವಂತೆ ಆಗ್ರಹಿಸಿದ್ದಾರೆ.

2021-22ನೇ ಸಾಲಿನ ಮುಂಗಾರು ಬೆಳೆಗಳನ್ನು ಎಂಎಸ್‌ಪಿ ಅನ್ವಯ ರಾಗಿ, ಭತ್ತ, ಬಿಳಿಜೋಳ ಸೇರಿ 8.2 ಲಕ್ಷ ಮೆಟ್ರಿಕ್ ಟನ್ ಖರೀದಿಗೆ ಕೇಂದ್ರ ಸರ್ಕಾರ ಅವಕಾಶ ಕಲ್ಪಿಸಿದೆ. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ತಾಲೂಕು ಕಚೇರಿಗಳಲ್ಲಿ ರೈತರು ನೋಂದಣಿ ಮಾಡಿಕೊಳ್ಳುತ್ತಿದ್ದು, ಮಾರ್ಚ್ ಅಂತ್ಯದವರೆಗೂ ಅವಕಾಶವಿದೆ. ಆದರೆ, ರಾಗಿ ಮಾರಾಟ ಜ.24ಕ್ಕೆ ಸ್ಥಗಿತಗೊಂಡಿದೆ. ನಿಗದಿತ 2.1 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ರೈತರು ನೋಂದಣಿ ಮಾಡಿರುವ ಪರಿಣಾಮ ನಿಲ್ಲಿಸಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. 2020-21ನೇ ಸಾಲಿನಲ್ಲಿ 2.06 ಲಕ್ಷ ರೈತರಿಂದ 4.7 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಸಲಾಗಿತ್ತು. ಪ್ರತಿ ಕ್ವಿಂಟಾಲ್‌ಗೆ ರೂ.3,295 ರೂ.ರಂತೆ (ಪ್ರತಿ ರೈತರಿನಿಂದ ಗರಿಷ್ಠ 75 ಕ್ವಿಂಟಾಲ್) ಖರೀದಿಸಲಾಗಿತ್ತು. ಈ ಬಾರಿ ಕ್ವಿಂಟಲ್ ರಾಗಿಗೆ 3,377 ರೂ. ನಿಗದಿ ಮಾಡಿ ಪ್ರತಿ ರೈತನಿಂದ ಕೇವಲ 20 ಕ್ವಿಂಟಾಲ್ ಮಾತ್ರ ಖರೀದಿಗೆ ನಿಗದಿ ಮಾಡಲಾಗಿತ್ತು. ಆದರಲ್ಲಿಯೂ ಸಣ್ಣ ಮತ್ತು ಅತೀ ಸಣ್ಣ ರೈತರಿಂದ ಮಾತ್ರ ಧಾನ್ಯ ಖರೀದಿಸಲಾಗುತ್ತಿದೆ. 5 ಎಕರೆ ಮೇಲ್ಪಟ್ಟವರಿಗೆ ಸೌಲಭ್ಯ ಸಿಕ್ಕಿಲ್ಲ.

ಆದರೂ ತಾಲೂಕು ಕಚೇರಿಗಳ ಮುಂಭಾಗ ನೂರಾರು ರೈತರು ರಾಗಿ ಮಾರಾಟಕ್ಕೆ ಸಾಲುಗಟ್ಟಿ ನಿಂತಿದ್ದಾರೆ. ಸೋಮವಾರ ವೆಬ್‌ಸೈಟ್ ಸ್ಥಗಿತಗೊಂಡಿದೆ. ಈ ಬಗ್ಗೆ ಕಚೇರಿ ಸಿಬ್ಬಂದಿಯನ್ನು ಪ್ರಶ್ನಿಸಿದಾಗ ನಮಗೂ ಸೂಕ್ತ ಮಾಹಿತಿ ಇಲ್ಲ. 3 ದಿನಗಳ ಬಳಿಕ ದೂರವಾಣಿ ಕರೆ ಮಾಡಿ ಬರುವಂತೆ ಮೊಬೈಲ್ ನಂಬರ್ ಕೊಟ್ಟು ಕಳುಹಿಸುತ್ತಿದ್ದಾರೆ. ಏಕಾಏಕಿ ಬೆಂಬಲ ಬೆಲೆ ಸೇವೆ ಸ್ಥಗಿತ ಮಾಡಿರುವ ಪರಿಣಾಮ ರಾಗಿ ಬೆಳೆದ ರೈತರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಕೂಡಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಅಥವಾ ರಾಜ್ಯ ಸರ್ಕಾರವೇ ಹೆಚ್ಚುವರಿ ರಾಗಿ ಖರೀದಿಗೆ ಕ್ರಮ ತೆಗೆದುಕೊಳ್ಳಬೇಕು. ಇಲ್ಲವಾದರೆ, ಬೀದಿಗೆ ಇಳಿದು ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ರೈತರು ಎಚ್ಚರಿಕೆ ನೀಡಿದ್ದಾರೆ.



ಸಾಂದರ್ಭಿಕ ಚಿತ್ರ

ಯಾವುದಕ್ಕೆ ಎಷ್ಟು ಬೆಂಬಲ ಬೆಲೆ?

ಧಾನ್ಯ	ಬೆಂಬಲ ಬೆಲೆ(ರೂ.)	ಲಕ್ಷ ಮೆಟ್ರಿಕ್ ಟನ್	ಖರೀದಿವೆಚ್ಚ
ಭತ್ತ	1,960	5	970
ಬಿಳಿಜೋಳ	2,758	1.10	303.38
ರಾಗಿ	3,377	2.1	709.17
ಒಟ್ಟು		8.2	1982.55

(ಕೋಟಿ ರೂ.ಗಳಲ್ಲಿ)

ಅನ್ನದಾತನಿಗೆ ಸಂಕಷ್ಟ

- ಅನಿರ್ವಾಯವಾಗಿ ದಲ್ಲಾಳಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಬೇಕು
- ಕೃಷಿ ಸಾಲ ತೀರಿಸಲು ಸಾಧ್ಯವಾಗದೇ ರೈತ ಕುಟುಂಬಕ್ಕೆ ಆರ್ಥಿಕ ಸಂಕಷ್ಟ
- ಎಂಎಸ್‌ಪಿ ಸೇವೆ ಸರ್ಕಾರ ವರ್ಷದಿಂದ ವರ್ಷಕ್ಕೆ ಇಳಿಸುವ ತಂತ್ರಗಾರಿಕೆ
- ಬಹುರಾಷ್ಟ್ರೀಯ ಕಂಪನಿಗಳ ಅವಲಂಬನೆ ಮಾಡುವಂತೆ ವೇದಿಕೆ ಸೃಷ್ಟಿ
- ಪಡಿತರ ಸೇವೆಗೆ ಬೇರೆ ರಾಜ್ಯದಿಂದ ಧಾನ್ಯ ಖರೀದಿಸುವ ಕುತಂತ್ರ

> ಕೇಂದ್ರ ಸರ್ಕಾರ ಬೆಂಬಲ ಬೆಲೆ ಯೋಜನೆಯಡಿ 2.1 ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ನಿಗದಿ ಮಾಡಿದ್ದು, ಈಗಾಗಲೆ ಪೂರ್ಣಗೊಂಡಿರುವ ಪರಿಣಾಮ ವೆಬ್‌ಸೈಟ್‌ನಲ್ಲಿ ಸೇವೆ ಸ್ಥಗಿತಗೊಂಡಿದೆ. ಬಿಳಿಜೋಳ ಮತ್ತು ಭತ್ತ ಮುಂದುವರಿದಿದೆ.
>
> ಎಚ್.ಆರ್. ವಿಜಯಕುಮಾರ್ ಜಂಟಿ ನಿರ್ದೇಶಕ, ಆಹಾರ ಇಲಾಖೆ

> ಬೆಂಬಲ ಬೆಲೆಗೆ ಧಾನ್ಯಗಳನ್ನು ಖರೀದಿಸಲು ಮುಖ್ಯಮಂತ್ರಿಗಳು ಸ್ಪಂಧಿಸುತ್ತಿಲ್ಲ. ಆದರೆ, ರೈತರನ್ನು 2ನೇ ದರ್ಜೆ ನಾಗರಿಕನಾಗಿ ಮಾಡಲು ಹೊರಟಿರುವುದು ಹಾಸ್ಯಾಸ್ಪದ ವಾಗಿದೆ. ಎಲ್ಲ ರೈತರಿಂದ ಧಾನ್ಯ ಖರೀದಿಸಬೇಕು. ಇಲ್ಲವಾದರೆ, ರಸ್ತೆಗಿಳಿದು ಹೋರಾಟ ಮಾಡುತ್ತೇವೆ.
>
> ಬಡಗಲಪುರ ನಾಗೇಂದ್ರ ಕರ್ನಾಟಕ ರಾಜ್ಯ ರೈತ ಸಂಘ

25-01-2022 Vv Pg 10

For more information visit
University Library Website
Web - uasbagrilibindia.org
E-mail- librarian@uasbangalore.edu.in

ಬೆಳೆಗಾರನಿಗೆ ಎದುರಾಗಿದೆ ನಷ್ಟದ ಸೂಚನೆ | ಕಚ್ಚಿರುವ ಹೂವು ಕಾಯಿ ಆಗುವುದೇ ಅನುಮಾನ

ರೈತರ ಪಾಲಿಗೆ ಕಹಿ ಆಗಲಿದೆಯೇ ಮಾವು?

■ ಗಂಗಾಧರ್ ಬೈರಾಪಟ್ಟಣ ರಾಮನಗರ

ರೈತರ ಪಾಲಿಗೆ ಮಾವು ಮತ್ತೊಮ್ಮೆ ಕಹಿ ಆಗುವ ಲಕ್ಷಣಗಳು ಗೋಚರವಾಗುತ್ತಿವೆ. ಹವಾಮಾನ ವೈಪರೀತ್ಯದಿಂದ ಪ್ರತಿ ವರ್ಷವೂ ನಷ್ಟಕ್ಕೆ ಒಳಗಾಗುತ್ತಿರುವ ಬೆಳೆಗಾರರಿಗೆ ಈ ಬಾರಿಯೂ ನಷ್ಟದ ಸೂಚನೆ ಸಿಕ್ಕಿದೆ.

ರಾಜ್ಯದ ಮಾರುಕಟ್ಟೆಗೆ ಮೊದಲು ಪ್ರವೇಶ ಪಡೆಯುವ ರಾಮನಗರ ಮಾವು ಈ ಬಾರಿ ಹೆಚ್ಚಿನ ಪ್ರಮಾಣದಲ್ಲಿ ಬರುತ್ತದೆ ಎನ್ನುವ ನಿರೀಕ್ಷೆ ಇತ್ತು. ಆದರೆ ಡಿಸೆಂಬರ್ ಅಂತ್ಯದವರೆಗೂ ಬಿದ್ದ ಮಳೆ, ಈಗ ಸುರಿಯುತ್ತಿರುವ ಹಿಮ ಹಾಗೂ ಮಧ್ಯಾಹ್ನ ಆಗುತ್ತಿದ್ದಂತೆ ಏರುತ್ತಿರುವ ಬಿಸಿಲ ತಾಪಮಾನ ಪೂರ್ಣ ಪ್ರಮಾಣದಲ್ಲಿ ಹೂವು ಕಚ್ಚಲು ತೊಡಕಾಗಿದೆ. ಈಗಾಗಲೇ ಕಚ್ಚಿರುವ ಹೂವು ಕೂಡ ಬಿಸಿಲು ಮತ್ತು ತೇವಾಂಶದ ಆಟಕ್ಕೆ ಕಾಯಿ ಆಗುವುದೇ ಎನ್ನುವ ಅನುಮಾನವೂ ಮೂಡಿದೆ.

ಕಳೆದ ಎರಡು ಬಾರಿ ಕರೊನಾದಿಂದಾಗಿ ಬೆಳೆಗಾರರು ನಷ್ಟ ಅನುಭವಿಸಿದ್ದರು. ಈ ಬಾರಿ ಉತ್ತಮ ಮಳೆಯಾಗಿದ್ದರಿಂದ ಉತ್ತಮ ಬೆಳೆಯ ನಿರೀಕ್ಷೆಯೂ ಇತ್ತು. ಆದರೆ ಬಿಸಿಲಿನಿಂದಾಗಿ ಕಾಯಿ ಉದುರುತ್ತಿವೆ.

ಬೇಡಿಕೆ ಇದ್ದರೂ ಬೆಳೆಯಿಲ್ಲ: ಜಿಲ್ಲೆಯಲ್ಲಿ 30 ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ


ವಿಜಯವಾಣಿ

ಮಾವು ಬೆಳೆಯಲಾಗುತ್ತದೆ. ವಾರ್ಷಿಕ ಸುಮಾರು 2.5 ಲಕ್ಷ ಟನ್‌ಗಳಷ್ಟು ಇಳುವರಿ ಇದ್ದು, 400 ಕೋಟಿ ರೂ. ವಾರ್ಷಿಕ ವಹಿವಾಟು ನಡೆಯುತ್ತದೆ. ಈ ಹಿಂದೆ ಮಾವು ಉತ್ಪಾದನೆ ಇದ್ದರೂ ಖರೀದಿಯಾಗದೆ ರೈತರು ನಷ್ಟಕ್ಕೆ ಒಳಗಾದರೆ, ಈ ಬಾರಿ ಮಾರುಕಟ್ಟೆಯಲ್ಲಿ ಬೇಡಿಕೆ ಇದ್ದರೂ ಉತ್ಪಾದನೆ ಕುಸಿತದಿಂದಾಗಿ ನಷ್ಟ ಉಂಟಾಗಲಿದೆ.

ಅಕಾಲಿಕ ಚಿಗುರು

ಅಕಾಲಿಕ ಮಳೆಯ ಕಾರಣದಿಂದಾಗಿ ಈ ಬಾರಿ ಶೇ.20 ಪ್ರಮಾಣದಲ್ಲಿ ಮಾವಿನ ಮರಗಳು ಚಿಗುರೊಡೆದಿವೆ. ಇದು ಫಸಲಿನ ಮೇಲೆ ಪರಿಣಾಮ ಬೀರಲಿದೆ. ಅಲ್ಲದೆ, ಈಗಾಗಲೇ ಕಚ್ಚಿರುವ ಹೂವು ಸಹ ಹವಾಮಾನ ವೈಪರೀತ್ಯ ಕಾರಣದಿಂದಾಗಿ ಉದುರುತ್ತಿವೆ ಎನ್ನುವುದು ರೈತರ ಅಳಲು. ಈ ಬಾರಿ ಶೇ.80 ಫಸಲು ಸಿಗುವ ಸಾಧ್ಯತೆ ಇದೆ ಎನ್ನುವುದು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಅಭಿಪ್ರಾಯವಾದರೆ, ಶೇ.50ರಷ್ಟೂ ಫಸಲು ಸಿಗುವುದಿಲ್ಲ ಎನ್ನುತ್ತಾರೆ ರೈತರು.

ಈ ಬಾರಿ ಹವಾಮಾನ ವೈಪರೀತ್ಯದಿಂದಾಗಿ ಮಾವು ಇಳುವರಿ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಇದರ ಜತೆಗೆ ಬಿಸಿಲು ಹೆಚ್ಚಿರುವುದರಿಂದ ಮತ್ತಷ್ಟು ನಷ್ಟ ಉಂಟಾಗುವ ಸಾಧ್ಯತೆ ಇದೆ. ಬಿಟ್ಟಿರುವ ಹೂವು ಕಾಯಿ ಆಗುತ್ತಿಲ್ಲ. ಸರ್ಕಾರ ಬೆಳೆಗಾರರ ನೆರವಿಗೆ ಬರಬೇಕು.

| ಸಿದ್ಧರಾಜು
ಮಾವು ಬೆಳೆಗಾರ, ರಾಮನಗರ

ಅಕಾಲಿಕ ಮಳೆ, ವಾತಾವರಣದಲ್ಲಿ ತೇವಾಂಶ ಇರುವ ಕಾರಣ ನಿರೀಕ್ಷಿತ ಪ್ರಮಾಣದಲ್ಲಿ ಗಿಡಗಳು ಹೂವು ಕಚ್ಚಿಲ್ಲ. ಅಲ್ಲದೆ, ಅಕಾಲಿಕ ಮಳೆ ಕಾರಣದಿಂದಾಗಿ ಕೆಲವು ಕಡೆಗಳಲ್ಲಿ ಮತ್ತೆ ಗಿಡ ಚಿಗುರೊಡೆದಿರುವುದು ಸ್ವಲ್ಪ ನಷ್ಟ ಉಂಟು ಮಾಡಲಿದೆ. ಸದ್ಯದ ಮಟ್ಟಿಗೆ ಈ ಬಾರಿ ಶೇ.20 ನಷ್ಟವಾಗುವ ಸಾಧ್ಯತೆ ಇದೆ.

| ಮುನೇಗೌಡ ತೋಟಗಾರಿಕೆ ಇಲಾಖೆ
(ರಾಮನಗರ) ಉಪನಿರ್ದೇಶಕ

25-01-2022 Vv Pg 06

25-01-2022 Vv Pg 07

ಸಾಲ ಮನ್ನಾ ಯೋಚನೆ ಇಲ್ಲ | ಬಲವಂತದ ಸಾಲ ವಸೂಲಿಯೂ ಇಲ್ಲ

30.26 ಲಕ್ಷ ರೈತರಿಗೆ 19,370 ಕೋಟಿ ರೂ. ಸಾಲ

■ ವಿಜಯವಾಣಿ ಸುದ್ದಿಜಾಲ,ಬೆಂಗಳೂರು

ರಾಜ್ಯದ 30.26 ಲಕ್ಷ ರೈತರಿಗೆ 2021-22ನೇ ಸಾಲಿನಲ್ಲಿ 19,370 ಕೋಟಿ ರೂ. ಅಲ್ಪಾವಧಿ ಬೆಳೆ ಸಾಲ 0.60 ಲಕ್ಷ ರೈತರಿಗೆ 1,440 ಕೋಟಿ ರೂ. ಮಧ್ಯಮಾವಧಿ/ದೀರ್ಘಾವಧಿ ಸಾಲ ವಿತರಿಸಲಾಗಿದೆ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು. ಒಟ್ಟು 30.86 ಲಕ್ಷ ರೈತರಿಗೆ 20,810 ಕೋಟಿ ರೂ. ಸಾಲ ನೀಡಿಕೆ ಗುರಿ ಹೊಂದಲಾಗಿತ್ತು ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು. ಸಾಲ ಮನ್ನಾ ಬಗ್ಗೆ ಯೋಚಿಸಿಲ್ಲ. ಶೂನ್ಯ ಬಡ್ಡಿದರದ ಸಾಲ ಶೇ.100 ಗುರಿ ಸಾಧಿಸಲು ಪ್ರಯತ್ನಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.



ಡಿ.31ರವರೆಗೆ 19.27 ಲಕ್ಷ ರೈತರಿಗೆ 13,295 ಕೋಟಿ ರೂ. ಅಲ್ಪಾವಧಿ ಕೃಷಿ ಸಾಲ, 0.31 ಲಕ್ಷ ರೈತರಿಗೆ 893 ಕೋಟಿ ರೂ. ಮಧ್ಯಮಾವಧಿ/ದೀರ್ಘಾವಧಿ ಸಾಲ ಸೇರಿ ಒಟ್ಟು 19.58 ಲಕ್ಷ ರೈತರಿಗೆ 14,188 ರೂ. ಕೋಟಿ ಕೃಷಿ ಸಾಲ ನೀಡಲಾಗಿದೆ. ಮೂರು ತಿಂಗಳಲ್ಲಿ ಉಳಿದ ಗುರಿ ಸಾಧಿಸಲು ಸಂಬಂಧಿಸಿದ ಡಿಸಿಸಿ ಬ್ಯಾಂಕಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಲಾಗಿದೆ ಎಂದರು.

ಬಡ್ಡಿ ಸಹಾಯಧನಕ್ಕೆ 1012 ಕೋಟಿ ರೂ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮತ್ತು ಡಿಸಿಸಿ ಬ್ಯಾಂಕಿನ ಅಲ್ಪಾವಧಿ ಮತ್ತು ಮಧ್ಯಮಾವಧಿ ಕೃಷಿ ಸಾಲ ವಸೂಲಾತಿ ಕ್ರಮವಾಗಿ ಶೇ.94.93 ಹಾಗೂ ಶೇ.76.29 ಆಗಿದೆ. ಈ ಯೋಜನೆ ಅನುಷ್ಠಾನಕ್ಕಾಗಿ ಈ ವರ್ಷದಲ್ಲಿ ಸಹಕಾರ ಸಂಸ್ಥೆಗಳಿಗೆ ರೂ.1,012 ಕೋಟಿಗಳ ಬಡ್ಡಿ ಸಹಾಯಧನ ನೀಡಲು ಆನುದಾನ ಕಲ್ಪಿಸಿದ್ದು, ಈವರೆಗೆ 757.21 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಸ್ವಸಹಾಯ ಗುಂಪುಗಳಿಗೆ ಸಾಲ ವಿತರಣೆ: ಡಿ.31ರವರೆಗೆ ಸಾಲ ವಿತರಣೆ 19,196 ಸ್ವಸಹಾಯ ಗುಂಪುಗಳಿಗೆ 689 ಕೋಟಿ ರೂ. ನೀಡಲಾಗಿದೆ. ಈ ಸಾಲಿನಲ್ಲಿ ವಸೂಲಾಗುವ ಸಾಲಗಳಿಗೆ ಬಡ್ಡಿ ಸಹಾಯಧನಕ್ಕಾಗಿ ಆಯವ್ಯಯದಲ್ಲಿ 90.41 ಕೋಟಿ ರೂ. ಒದಗಿಸಲಾಗಿದ್ದು, ಡಿಸಿಸಿ ಬ್ಯಾಂಕುಗಳಿಗೆ ಇದುವರೆಗೆ 36.01 ಕೋಟಿ ರೂ. ಬಡ್ಡಿ ಸಹಾಯಧನ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದರು.

ಅಡಮಾನ ಸಾಲ ವಿತರಣೆ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಪ್ರಾಥಮಿಕ ಕೃಷಿ ಮಾರುಕಟ್ಟೆ ಸಹಕಾರ ಸಂಘಗಳು ರೈತರು ಬೆಳೆದ ಕೃಷಿ ಉತ್ಪನ್ನಗಳನ್ನು ತಮ್ಮ ಗೋದಾಮುಗಳಲ್ಲಿ ಶೇಖರಣೆ ಮಾಡಿ ಶೇ.7ರ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ. ಯೋಜನೆಯಲ್ಲಿ ಈ ಸಾಲಿನಲ್ಲಿ ಡಿಸೆಂಬರ್ ಅಂತ್ಯದವರೆಗೆ 18,958 ರೈತರಿಗೆ 306 ಕೋಟಿ ರೂ. ಸಾಲ ವಿತರಿಸಲಾಗಿದೆ.

ಸಹಕಾರ ಬ್ಯಾಂಕುಗಳ ಮಾಹಿತಿ: ರಾಜ್ಯದಲ್ಲಿ ಒಟ್ಟು 264 ಪಟ್ಟಣ ಸಹಕಾರ ಬ್ಯಾಂಕುಗಳು ಕಾರ್ಯನಿರ್ವಹಿಸುತ್ತಿದ್ದು, ಇವು ಡಿಸೆಂಬರ್ ಅಂತ್ಯಕ್ಕೆ 45,580.09 ಕೋಟಿ ರೂ. ಠೇವಣಿ, 52,593.94 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು, 29,219.38 ಕೋಟಿ ರೂ. ಸಾಲ ಮತ್ತು ಮುಂಗಡ ನೀಡಿವೆ. ಜತೆಗೆ 301.34 ಕೋಟಿ ರೂ. ಲಾಭ ಗಳಿಸಿರುತ್ತವೆ. 18 ಪಟ್ಟಣ ಬ್ಯಾಂಕುಗಳನ್ನು ದುರ್ಬಲ ಸಹಕಾರ ಬ್ಯಾಂಕುಗಳೆಂದು ಗುರುತಿಸಲಾಗಿದೆ ಎಂದು ಸೋಮಶೇಖರ್ ತಿಳಿಸಿದರು.

ಬಹೂಪಯೋಗಿ ಕೇಂದ್ರ ಸ್ಥಾಪನೆ

ಕೇಂದ್ರ ಸರ್ಕಾರದ ಆತ್ಮನಿರ್ಭರ ಯೋಜನೆಯಡಿ ಬಹೋಪಯೋಗಿ ಕೇಂದ್ರಗಳನ್ನಾಗಿ ಸ್ಥಾಪಿಸುವ ಯೋಜನೆ ರೂಪಿಸಲಾಗಿದ್ದು, ಈ ಯೋಜನೆಯಲ್ಲಿ ರೈತರ ಕೃಷಿ ಉತ್ಪನ್ನಗಳನ್ನು ಸಂಗ್ರಹಿಸಲು ಗೋದಾಮು ಸೌಲಭ್ಯ ಮತ್ತು ಕೊಯ್ಲು ನಂತರದ ಮೂಲಭೂತ ಸೌಕರ್ಯವನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಒದಗಿಸಲು ಉದ್ದೇಶಿಸಲಾಗಿದೆ. 1000 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ನಬಾರ್ಡ್ 873 ಸಂಘಗಳಿಗೆ 302 ಕೋಟಿ ರೂ. ಸಾಲ ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಕರೊನಾ ಸೋಂಕಿನ ತೀವ್ರತೆ ಹಿನ್ನೆಲೆಯಲ್ಲಿ ಸಹಕಾರ ಸಂಘಗಳ ಚುನಾವಣೆಯನ್ನು ಮಾರ್ಚ್ 31ರವರೆಗೆ ಮುಂದೂಡಲಾಗಿದೆ. ಸೋಂಕು ಇಳಿಮುಖವಾದರೆ ಸಿಎಂ ಗಮನಕ್ಕೆ ತಂದು ಚುನಾವಣೆ ನಡೆಸಲು ಕ್ರಮಕೈಗೊಳ್ಳಾಗುವುದು

| ಎಸ್.ಟಿ.ಸೋಮಶೇಖರ್ ಸಹಕಾರ ಸಚಿವ